■ ಹನಿ

## ಅಮೀರ್ ಬೆಳ್ಳಿಹಬ್ಬ

ಬಾಲಿವುಡ್ ನಟರ ಪೈಕಿ ಅಮೀರ್‌ಖಾನ್ ಅತ್ಯಂತ ವಿಶಿಷ್ಟ ವ್ಯಕ್ತಿ. 48ರ ಹರೆಯದ ಅಮೀರ್‌ಖಾನ್ ಸಿನಿಮಾ ರಂಗಕ್ಕೆ ಬಂದು 25 ವರ್ಷಗಳಾದವು. ನಟಿಸಿರುವ ಚಿತ್ರಗಳ ಸಂಖ್ಯೆ ದೊಡ್ಡದಲ್ಲವಾದರೂ, ನಟಿಸಿರುವ ಪ್ರತಿಯೊಂದು ಚಿತ್ರಗಳೂ ಪ್ರೇಕ್ಷಕರನ್ನು ಸೆಳೆದದ್ದಂತೂ ನಿಜ. 1988ರಲ್ಲಿ 'ಖಯಾಮತ್ ಸೆ ಖಯಾಮತ್ ತಕ್' ಎಂಬ ಸಿನಿಮಾದಲ್ಲಿ ಅಮೀರ್ ಮೊದಲು ನಟಿಸಿದಾಗ, ಚಾಕೊಲೇಟ್ ಹೀರೊ ಎಂದೇ ಬ್ರ್ಯಾಂಡ್ ಆಗಿದ್ದ. ಮೊದಲ 10-15 ವರ್ಷಗಳ ಕಾಲ ಈ ಬ್ರ್ಯಾಂಡ್ ಮುಂದುವರಿಯಿತು. ಆದರೆ ಆ ಬಳಿಕದ ವರ್ಷಗಳಲ್ಲಿ ಬಾಲಿವುಡ್ ಸಿನಿಮಾಗಳ ವಸ್ತು, ಶೈಲಿ ಮತ್ತು ನಿರೂಪಣೆಗಳೆಲ್ಲವೂ ಬದಲಾಗುತ್ತಿರುವುದರಲ್ಲಿ ಅಮೀರ್‌ನ ಪಾತ್ರವೂ ದೊಡ್ಡದಿದೆ. 'ರಾಜಾ ಹಿಂದೂಸ್ತಾನಿ'-ವರೆಗೆ ಇತರ ಬಾಲಿವುಡ್ ನಟರ ದಾರಿಯಲ್ಲೇ ಇದ್ದ ಅಮೀರ್, 'ಸರ್‌ಫರೋಜ್' ಬಳಿಕ ಬದಲಾದದ್ದು ಸ್ಪಷ್ಟ. ಲಗಾನ್, ದಿಲ್ ಚಾಹ್ತಾ ಹೈ, ತ್ರೀ ಈಡಿಯಟ್ಸ್, ಡೆಲ್ಲಿ ಬೆಲ್ಲಿ, ತಾರೆ ಜಮೀನ್ ಪರ್-ಮುಂತಾದ ಚಿತ್ರಗಳಲ್ಲಿ ಕಂಡ ಅಮೀರ್ ಚಿತ್ರಣ ಪೂರ್ತಿ ವಿಭಿನ್ನ. ಮುಂದೆ ಬರಲಿರುವ ರಾಜ್‌ಕುಮಾರ್ ಹಿರಾನಿಯ 'ಪೀಕೆ' ಎನ್ನುವ ಚಿತ್ರದ್ದೂ ಡಿಫರೆಂಟ್ ಕಥೆ. ಈಗ ಯಶಸ್ವಿ ಪ್ರದರ್ಶನ ಕಾಣುತ್ತಿರುವ ಧೂಮ್-3 ನಲ್ಲಿ ಖಳನಾಯಕನ ರೂಪದಲ್ಲಿ ಕಾಣಿಸಿಕೊಂಡಿರುವ ಅಮೀರ್ ಬಾಲಿವುಡ್‌ನ ಬಹುದೊಡ್ಡ ಕಮರ್ಷಿಯಲ್ ಹೀರೊ ಕೂಡಾ ಹೌದು. ಧೂಮ್-3 ಈಗಾಗಲೆ 450 ಕೋಟಿ ರೂಪಾಯಿ ಕಲೆಕ್ಷನ್ ಗಡಿ ದಾಟಿ ಬಾಲಿವುಡ್‌ನಲ್ಲಿ ಹೊಸ ಬಾಕ್ಸಾಫೀಸ್ ದಾಖಲೆ ಕೂಡಾ ಬರೆದಿದೆ.



'ಯಾವ ಸಿನಿಮಾ ಆದರೂ ಅದರ ಕಥೆ- ನಿರೂಪಣೆ ನನಗೆ ಹೃದಯಕ್ಕೆ ಹತ್ತಿರ ಅನ್ನಿಸಿದರೆ ಮಾತ್ರ ನಟಿಸುತ್ತೇನೆ. ಹಣದಿಂದ ನನ್ನನ್ನು ಖರೀದಿಸಲಾಗದು. ಯಾರಾದರೂ 100 ಕೋಟಿ ಸಂಭಾವನೆ ಕೊಡುತ್ತೇನೆ ಅಂದರೂ ನಾನು ನಿರ್ಮಾಪಕರು ಬಯಸಿದ ಚಿತ್ರಗಳಲ್ಲಿ ನಟಿಸುವುದಿಲ್ಲ. ಅದೇ ನನ್ನ ಶಕ್ತಿ' ಎನ್ನುತ್ತಾನೆ ಅಮೀರ್. ಅಮೀರ್ ನಡೆಸಿಕೊಟ್ಟ 'ಸತ್ಯಮೇವ ಜಯತೆ' ಎನ್ನುವ ಟೀವಿ ಸೀರಿಯಲ್ ಆತನಿಗೆ ಹೊಸ ಇಮೇಜ್ ನೀಡಿತ್ತು. ಜನಸಾಮಾನ್ಯರ ನಡುವೆಯೇ ಓಡಾಡುತ್ತಿದ್ದ ಅಮೀರ್ ಇದೀಗ ಬಾಲಿವುಡ್‌ನ ಅತ್ಯಂತ ದುಬಾರಿ ಎನ್ನಲಾದ ಬುಲೆಟ್ ಪ್ರೂಫ್ ಕಾರೊಂದನ್ನು ಖರೀದಿಸಿದ್ದಾನಂತೆ. ಈವರೆಗೆ ಬಾಲಿವುಡ್‌ನಲ್ಲಿ ಹೃತಿಕ್ ರೋಶನ್ ಬಳಿ ಮಾತ್ರ ಬುಲೆಟ್‌ಪ್ರೂಫ್ ಕಾರು ಇತ್ತು. ಆದರೆ ಅಮೀರ್ ಕಾರು ಅದಕ್ಕಿಂತ ದುಬಾರಿಯಂತೆ. ಅಮೀರ್ ಈ ಹೊಸ ಕಾರಿನಲ್ಲಿ ತನಗೆ ಬೇಕಾದ ಹಲವು ಬದಲಾವಣೆಗಳನ್ನು ರೂಪಿಸಲು ವಿಶೇಷ ಫಿಟಿಂಗ್ಸ್ ಮಾಡಿಸುತ್ತಿದ್ದಾನಂತೆ! ಚಿತ್ರಜೀವನದ ಬೆಳ್ಳಿಹಬ್ಬದ ಈ ಹೊತ್ತಲ್ಲಿ 'ಬುಲೆಟ್' ಭಯವೇಕೋ ಗೊತ್ತಾಗಲಿಲ್ಲ. ●



## ಸ್ಪೀಲ್‌ಬರ್ಗ್ ಆತಂಕ

ಅಮೆರಿಕದ 'ಅತ್ಯಂತ ಪ್ರಭಾವಶಾಲಿ ಸೆಲೆಬ್ರಿಟಿ'ಗಳ ಪಟ್ಟಿ ಪ್ರಕಟವಾಗಿದೆ. ಫೋರ್ಬ್ಸ್ ನ ಈ ಪಟ್ಟಿಯಲ್ಲಿ ಹಾಲಿವುಡ್ ನಿರ್ದೇಶಕ- ನಿರ್ಮಾಪಕ ಸ್ಟೀವನ್ ಸ್ಪೀಲ್‌ಬರ್ಗ್ ಮೊದಲ ಸ್ಥಾನ ಗಳಿಸಿದ್ದಾರೆ. ಜನಪ್ರಿಯತೆಯ ಪಟ್ಟಿಯಲ್ಲಿ ಈತ ಓಪ್ರಾ ವಿನ್‌ಫ್ರೀಯನ್ನೂ ಹಿಂದಿಕ್ಕಿರುವುದು ವಿಶೇಷ. 'ಜುರಾಸಿಕ್ ಪಾರ್ಕ್' ಚಿತ್ರದ ಮೂಲಕ ಜಗತ್ತಿನಾದ್ಯಂತ ಹೊಸ ತಲೆಮಾರಿನ ಚಿತ್ರವೀಕ್ಷಕರನ್ನು ಸೃಷ್ಟಿಸಿರುವ ಸ್ಪೀಲ್‌ಬರ್ಗ್, ಸದ್ಯಕ್ಕೆ ಹೊಸ ಸಿನಿಮಾ 'ರೋಬೋಪೊಕಲಿಪ್ಸ್' ಬಗ್ಗೆ ಭಾರೀ ತಲೆ ಕೆಡಿಸಿಕೊಂಡಂತಿದೆ. ಕಳೆದ ವರ್ಷ ಜನವರಿಯಲ್ಲಿ ಆರಂಭವಾಗಬೇಕಿದ್ದ ಈ ಹೊಸ ಚಿತ್ರದ ಶೂಟಿಂಗ್‌ಅನ್ನು ಎರಡು ಬಾರಿ ಮುಂದೂಡಲಾಗಿದೆ. ಹಳೆಯದನ್ನು ಕೈಬಿಟ್ಟು ಹೊಸ ಚಿತ್ರಕಥೆಯನ್ನೇ ಬರೆಯುವುದಾಗಿ ಸ್ಪೀಲ್‌ಬರ್ಗ್ ಹೇಳಿದ್ದಾರೆ. ಲೆಕ್ಕಾಚಾರ ಪ್ರಕಾರ 2014ರ ಏ.25ರಂದು ತೆರೆಗೆ ಬರಬೇಕಾದ ಈ ಚಿತ್ರ ಈಗ ಯಾವ ಹಂತದಲ್ಲಿದೆ ಎನ್ನುವುದೂ ಗೊತ್ತಾಗುತ್ತಿಲ್ಲ.

'ಹಾಲಿವುಡ್ ಸಿನಿಮಾಗಳ ನಿರ್ಮಾಣ ಮತ್ತು ಮಾರುಕಟ್ಟೆ ವೆಚ್ಚ ತೀವ್ರವಾಗಿ ಏರಿದೆ. ಹೀಗೇ ಆದಲ್ಲಿ ಟೀವಿಗಾಗಿ ಸಿನಿಮಾ ಮಾಡುವುದೇ ಒಳ್ಳೆಯದು. ಹಾಲಿವುಡ್ ಮಾರುಕಟ್ಟೆ ಪೂರ್ತಿ ನೆಲ ಕಚ್ಚುವ ಮುನ್ನ ಎಚ್ಚತ್ತುಕೊಳ್ಳಿ' ಎಂದು ಸ್ಪೀಲ್‌ಬರ್ಗ್ ಹೇಳಿದ್ದು ಇತ್ತೀಚೆಗೆ ದೊಡ್ಡ ಸುದ್ದಿ-ಯಾಯಿತು. ರೋಬೋ ಗಳು ಸ್ವತಂತ್ರ ಬುದ್ಧಿಮತ್ತೆ ರೂಢಿಸಿಕೊಂಡು ಮನುಷ್ಯ ಕುಲವನ್ನೇ ಅಳಿಸಲು ಹೊರಡುವುದು ಈ ಹೊಸ ಚಿತ್ರದ ಕಥೆಯಂತೆ. ಕಳೆದ ವರ್ಷ 'ಲಿಂಕನ್' ಚಿತ್ರಕ್ಕೆ 12 ಆಸ್ಕರ್ ನಾಮಕರಣಗಳನ್ನು ಹೊಂದಿ ಎರಡು ಪ್ರಶಸ್ತಿಗಳನ್ನು ಗೆದ್ದ ಸ್ಪೀಲ್‌ಬರ್ಗ್, ಭಾರತದಲ್ಲಿ 'ದಿ ಹಂಡ್ರಡ್ ಫೂಟ್ ಜರ್ನಿ' ಚಿತ್ರಕ್ಕೆ ಶೂಟಿಂಗ್ ನಡೆಸಿದ್ದು ಹಳೇ ಸುದ್ದಿ. ಸ್ಪೀಲ್‌ಬರ್ಗ್‌ರ ರೋಬೋ ಚಿತ್ರವನ್ನು ಜಗತ್ತಿನಾದ್ಯಂತ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವುದಂತೂ ನಿಜ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65